# <u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ</u>

**ಸಿ.ಸಿ. ನಂ. 1898/25**

ಚಾ.ಸಾ. 3

ಪ್ರಾ.ಸಾ. 4

| | | |
|---|---|---|
| ಸಾಕ್ಷಿದಾರರ ಹೆಸರು | – | ಲೇಖಾ ತಾಂಡೇಲ್ |
| ತಂದೆಯ ಹೆಸರು | – | ಜಾನು ತಾಂಡೇಲ್ |
| ವಯಸ್ಸು | – | 48 ವರ್ಷ |
| ಉದ್ಯೋಗ | – | ಮೀನುಗಾರಿಕೆ |
| ವಾಸ್ತವ್ಯ | – | ಅಮದಳ್ಳಿ, ಕಾರವಾರ ತಾಲೂಕ |

(ಇಂದು ದಿನಾಂಕಃ 21-04-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**<u>ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ</u>**

ಆರೋಪಿತನ ಪರಿಚಯ ಇಲ್ಲ. ಪೊಲೀಸರು ನನ್ನನ್ನು ದಾಳಿ ಮಾಡಲು ಕರೆದುಕೊಂಡು ಹೋಗಿಲ್ಲ. ನಾನು ದಾಳಿಯಲ್ಲಿ ಭಾಗಿಯಾಗಿಲ್ಲ. ನಾನು ಮುದಗಾದಲ್ಲಿ ಪೊಲೀಸರು ಹೇಳಿದಂತೆ ಸಹಿ ಹಾಕಿದ್ದೇನೆ. ಸುಮಾರು ಒಂದು ವರ್ಷದ ಹಿಂದೆ ನಾನು ವಾಯುವಿಹಾರಕ್ಕೆ ಹೋಗುವಾಗ ನನ್ನ ಸಹಿ ತೆಗೆದುಕೊಂಡಿದ್ದಾರೆ. 3 ದಾಖಲಾತಿಗಳಿಗೆ ಸಹಿ ತೆಗೆದುಕೊಂಡಿದ್ದಾರೆ. ಅದರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಸಾಕ್ಷಿ ಪಂಚರಿಗೆ ನೀಡಿದ ನೋಟಿಸ್, ಪಂಚನಾಮೆ, ಕಚ್ಚಾ ನಕ್ಷೆಯಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿ.ಪಿ.1 ರಿಂದ ನಿ.ಪಿ.3 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿ.ಪಿ.1(ಬಿ) ಯಿಂದ ನಿ.ಪಿ.3(ಬಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಹಿರಿಯ ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ</u>**

ದಿನಾಂಕ 10-01-2025 ರಂದು ನನ್ನನ್ನು ಮತ್ತು ಚಾ.ಸಾ.2 ರವರನ್ನು ಸೆನ್ ಪೊಲೀಸರು ಕರೆದು ನಿ.ಪಿ. 1 ರಂತೆ ನೋಟಿಸ್‌ನ್ನು ಜಾರಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾಳಿ ವಿಷಯವನ್ನು ತಿಳಿಸಿ ನಮ್ಮನ್ನು ದಾಳಿಗೆ ಕರೆದುಕೊಂಡು

ಹೋಗಿದ್ದರು ಅನ್ನುವುದು ಸರಿಯಲ್ಲ. ನಮ್ಮನ್ನು ಮುದಗಾ ಗ್ರಾಮದ ಫಿಶ್ ಮಿಲ್ ಹತ್ತಿರ ಆರೋಪಿಯ ಮನೆಯ ಹತ್ತಿರ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಆರೋಪಿ ಆ ಸಮಯದಲ್ಲಿ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದುದ್ದನ್ನು ಖಚಿತಪಡಿಸಿಕೊಂಡು ಆತನನ್ನು ಹಿಡಿದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಆತನ ವಶದಲ್ಲಿದ್ದ ಚೀಲವನ್ನು ಪರಿಶೀಲನೆ ಮಾಡಿದಾಗ ಗೋವಾ ರಾಜ್ಯದಲ್ಲಿ ತಯಾರಿಸಿದ ಬಾಟಲಿಗಳಾಗಿದ್ದವು ಎಂದರೆ ಸರಿಯಲ್ಲ. ಅವುಗಳನ್ನು ಪರಿಶೀಲನೆ ಮಾಡಿದಾಗ ಲೈಟ ಹಾರ್ಸ ಪ್ರಿಮೀಯಂ ವಿಸ್ಕಿಯ 180 ಎಂ.ಎಲ್.ನ 17 ಬಾಟಲಿಗಳು ಇದ್ದವು ಎಂದರೆ ಸರಿಯಲ್ಲ. ಲೈಟ ಹಾರ್ಸ ಪ್ರಿಮೀಯಂ ವಿಸ್ಕಿಯ 750 ಎಂ.ಎಲ್.ನ 14 ಬಾಟಲಿಗಳು ಇದ್ದವು ಎಂದರೆ ಸರಿಯಲ್ಲ. ಗೋವಾ ಕೊಕೊನೆಟ್ ಫೆನ್ನಿಯ 750 ಎಂ.ಎಲ್.ನ 7 ಬಾಟಲಿಗಳು ಇದ್ದವು ಎಂದರೆ ಸರಿಯಲ್ಲ. ಗೋವಾ ಕ್ಯಾಶಿವ್ ಫೆನ್ನಿಯ 750 ಎಂ.ಎಲ್.ನ 4 ಬಾಟಲಿಗಳು ಇದ್ದವು ಎಂದರೆ ಸರಿಯಲ್ಲ. ಕೊಕೊನೆಟ್ ಫೆನ್ನಿಯ 180 ಎಂ.ಎಲ್.ನ 50 ಬಾಟಲಿಗಳು ಇದ್ದವು ಎಂದರೆ ಸರಿಯಲ್ಲ. ಆತನನ್ನು ಪರವಾನಿಗೆ ಬಗ್ಗೆ ವಿಚಾರಿಸಲಾಗಿ ಯಾವುದೇ ಪರವಾನಿಗೆ ಆತನ ಬಳಿ ಇರಲಿಲ್ಲ ಅನ್ನುವುದು ಸರಿಯಲ್ಲ. ಸ್ಥಳದಲ್ಲಿ ದೊರೆತ ಎಲ್ಲಾ ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಬಿಳಿ ಚೀಲದಲ್ಲಿ ತುಂಬಿದ್ದರು ಎಂದರೆ ಸರಿಯಲ್ಲ. ಅದಕ್ಕೆ ಸೀಲ್ ಮಾಡಿದ್ದಾರೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಮಹಜರ ಮಾಡಿ ಸದರಿ ಬಾಟಲಿಗಳನ್ನು ಅಮಾನತ್ತುಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಹಾಜರಿದ್ದು ಮಹಜರನಲ್ಲಿ ಬರೆದ ವಿಷಯಗಳನ್ನು ತಿಳಿದುಕೊಂಡು ಸ್ಥಳದಲ್ಲಿ ಹಾಕಿದ್ದೇನೆ ಅನ್ನುವುದು ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ